**ಸಾಕ್ಷಿಯನ್ನು ದಿನಾಂಕ 25.9.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್.ಎಲ್ ವಕೀಲರಿಂದಃ</u>**

ನಾನು ಶ್ರೀರಂಗಪಟ್ಟಣದ ಮಹದೇವಪುರ ಗ್ರಾಮದಲ್ಲಿ 68 ವರ್ಷಗಳಿಂದ ವಾಸವಾಗಿರುತ್ತೇನೆ. ನಾನು ಅಬ್ದುಲ್ಲ ರವರ ಜಮೀನಿಗೆ ಸಂಬಂಧಪಟ್ಟಂತೆ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ದಾವಆಸ್ತಿಗಳು ಅಬ್ದುಲ್ಲ ಮತ್ತು ಬಿಲಾಲ್ ರವರಿಗೆ ಸೇರಿರುತ್ತದೆ. ಸದರಿ ಅಬ್ದುಲ್ಲ ಮತ್ತು ಬಿಲಾಲ್ ರವರು 2000 ನೇ ಸಾಲಿನಲ್ಲಿ ಮೈಸೂರಿನಲ್ಲಿ ವಾಸವಾಗಿದ್ದರು. ಅವರು ಹೆಚ್.ಎನ್.ನಾಗರಾಜು ರವರಿಗೆ ಆಸ್ತಿಯನ್ನು ನೋಂದಣಿ ಮಾಡಿಕೊಟ್ಟಿರುತ್ತಾರೆ. ಸದರಿ ಹೆಚ್.ಎನ್.ನಾಗರಾಜು ರವರು ನಮ್ಮ ಊರಿನವರಾಗಿರುತ್ತಾರೆ. ದಿನಾಂಕ 10.8.2000 ರಂದು ಸದರಿ ಹೆಚ್.ಎನ್.ನಾಗರಾಜು ರವರು ಮಹದೇವಪುರದಲ್ಲಿ ವಾಸವಾಗಿದ್ದರು. ದಾಖಲೆ ನೋಂದಣಿಗೆ ಬರಲು ನನಗೆ ಹೆಚ್.ಎನ್.ನಾಗರಾಜು ರವರು ಹೇಳಿರುತ್ತಾರೆ. ನಾನು ಸದರಿ ದಿನ ಮಹದೇವಪುರದಿಂದ ಬೆಳಿಗ್ಗೆ ಮೈಸೂರಿಗೆ ಬಂದಿದ್ದು, ಮೈಸೂರಿನಿಂದ ಹೆಚ್.ಎನ್.ನಾಗರಾಜು ರವರು ಹೆಚ್.ಡಿ.ಕೋಟೆಗೆ ಕರೆ ತಂದಿರುತ್ತಾರೆ. ನಾನು ಸದರಿ ದಿನ ಹೆಚ್.ಡಿ.ಕೋಟೆಗೆ ಬಂದಾಗ ಬೆಳಿಗ್ಗೆ 10.30 ಗಂಟೆಯಾಗಿತ್ತು. ನಾನು, ಹೆಚ್.ಎನ್.ನಾಗರಾಜು ಮತ್ತು ವೆಂಕಟೇಶ ರವರು ಹೆಚ್.ಡಿ.ಕೋಟೆಗೆ ಬಂದಿರುತ್ತೇವೆ. ಸದರಿ ವೆಂಕಟೇಶ ರವರು ಹೆಚ್.ಎನ್.ನಾಗರಾಜು ರವರ ಸ್ನೇಹಿತರಾಗಿರುತ್ತಾರೆ. ನಾನು, ಹೆಚ್.ಎನ್.ನಾಗರಾಜು ಮತ್ತು ವೆಂಕಟೇಶ ಬೇರೆ ಬೇರೆ ಜನಾಂಗದವರಾಗಿರುತ್ತೇವೆ. ನಾನು ಮತ್ತು ಹೆಚ್.ಎನ್.ನಾಗರಾಜು ರವರು ಮಹದೇವಪುರದಿಂದ ಹೆಚ್.ಡಿ.ಕೋಟೆಗೆ ಬಂದಿರುತ್ತೇವೆ. ವೆಂಕಟೇಶ ರವರು ಮೈಸೂರಿನಿಂದ ನಮ್ಮ ಜೊತೆ ಹೆಚ್.ಡಿ.ಕೋಟೆಗೆ ಬಂದಿರುತ್ತಾರೆ. ನಾವು ಸದರಿ ದಿನ ನೇರವಾಗಿ ಹೆಚ್.ಡಿ.ಕೋಟೆಯ ನೋಂದಣಿ ಕಛೇರಿಗೆ ಬಂದಿರುತ್ತೇವೆ. ನಾನು ನೋಂದಣಿ ಕಛೇರಿಯ ಒಳಗೆ ಸಹಿ ಮಾಡಿರುತ್ತೇನೆ. ಮೊದಲು ವೆಂಕಟೇಶ ರವರು ಸಹಿ ಮಾಡಿದ್ದು, ನಂತರ ನಾನು ಸಹಿ ಮಾಡಿರುತ್ತೇನೆ. ಸದರಿ ಪತ್ರವನ್ನು ನೀವು ಓದಿರುತ್ತೀರಾ ಎಂದರೆ ಸಾಕ್ಷಿದಾರರು ಪತ್ರ ಬರಹಗಾರರು ಓದಿ ಹೇಳಿರುತ್ತಾರೆ ಎನ್ನುವರು. ಸದರಿ ಪತ್ರವನ್ನು ಓದಿ ಹೇಳಿದಾಗ ನಾನು, ವೆಂಕಟೇಶ್, ಹೆಚ್.ಎನ್.ನಾಗರಾಜು, ಬಿಲಾಲ್, ಅಬ್ದುಲ್ಲ, ಅಮೀನಾ ಮತ್ತು ಬಾನು ಇದ್ದೆವು. ಪತ್ರವನ್ನು ನೋಂದಣಿ ಕಛೇರಿಯ ಹೊರಗಡೆ ಖಾಲಿ ಜಾಗದಲ್ಲಿ ತಯಾರಿಸಿ ಓದಿ ಹೇಳಿರುತ್ತಾರೆ. ಪತ್ರ ಬರಹಗಾರರು ಕೈಯಲ್ಲಿ ಬರೆದಿರುವುದನ್ನು ನೋಡಿರುತ್ತೀರಾ ಎಂದರೆ ಸಾಕ್ಷಿದಾರರು ಟೈಪು ಮಾಡಿಸಲು ಹೋಗಿರುತ್ತಾರೆ ಎನ್ನುವರು. ಪತ್ರ ಬರಹಗಾರರು ಮದ್ಯಾಹ್ನ 11 ಗಂಟೆಗೆ ಟೈಪು ಮಾಡಿಸಲು ಹೋಗಿ 1 ಗಂಟೆಯ ನಂತರ ಬಂದಿರುತ್ತಾರೆ. ಟೈಪು ಮಾಡಿಸಲು ನಾನು ಹೋಗಿರುವುದಿಲ್ಲ, ರಂಗಪ್ಪ, ಬಿಲಾಲ್ ಮತ್ತು ಅಬ್ದುಲ್ಲ ರವರು ಹೋಗಿರುತ್ತಾರೆ. ಟೈಪು ಮಾಡಿಸಿಕೊಂಡು ಬರುವವರೆಗೆ ನಾನು, ವೆಂಕಟೇಶ ಮತ್ತು

ಹೆಚ್.ಎನ್.ನಾಗರಾಜು ರವರು ಉಪ ನೋಂದಣಾಧಿಕಾರಿ ಕಛೇರಿಯ ಹೊರಗೆ ಮಾತನಾಡುತ್ತ ನಿಂತಿದ್ದೆವು. ಪತ್ರ ತಯಾರಿಸಲು ಸ್ಟಾಂಪ್ ಪೇಪರನ್ನು ರಂಗಪ್ಪ ಮತ್ತು ಅಬ್ದುಲ್ಲ ರವರು ತಂದಿರುತ್ತಾರೆ. ನಾನು ಖಾಲಿ ಸ್ಟಾಂಪ್ ಪೇಪರನ್ನು ನೋಡಿರುತ್ತೇನೆ. ಸ್ಟಾಂಪ್ ಪೇಪರ್ ತರುವವರೆಗೆ ನಾನು, ವೆಂಕಟೇಶ ಮತ್ತು ಹೆಚ್.ಎನ್.ನಾಗರಾಜು ರವರು ನೋಂದಣಿ ಕಛೇರಿಯ ಹತ್ತಿರ ಮಾತನಾಡುತ್ತ ನಿಂತಿದ್ದೆವು. ಅವರು ಸ್ಟಾಂಪ್ ಪೇಪರ್ ತಂದಾಗ ಮಧ್ಯಾಹ್ನ 12 ಗಂಟೆಯಾಗಿತ್ತು. ಸ್ಟಾಂಪ್ ಪೇಪರ್ ತಂದ ನಂತರ ಬಿಲಾಲ್ ಮತ್ತು ಅಬ್ದುಲ್ಲ ರವರು ಪತ್ರವನ್ನು ನೋಂದಣಿ ಕಛೇರಿಯ ಮುಂಭಾಗದಲ್ಲಿ ರಂಗಪ್ಪ ರವರು ಬರೆದಿರುತ್ತಾರೆ. ರಂಗಪ್ಪ ರವರು ಪತ್ರವನ್ನು ಕನ್ನಡ ಅಥವಾ ಇಂಗ್ಲೀಷ್ ನಲ್ಲಿ ಬರೆದಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಂತರ ಸಾಕ್ಷಿದಾರರು ಮುಂದುವರಿದು ಕನ್ನಡದಲ್ಲಿ ಬರೆದಿರುತ್ತಾರೆ ಎನ್ನುವರು. ರಂಗಪ್ಪ ರವರು ಕೈಯಲ್ಲಿ ಬರೆಯುತ್ತಿದುದ್ದನ್ನು ನಾನು ನೋಡಿರುತ್ತೇನೆ. ಅವರು ಏನು ಬರೆದಿರುತ್ತಾರೆ ಎಂದು ನಾನು ಓದಿ ನೋಡಿರುವುದಿಲ್ಲ. ಅವರು ಬರೆದ ಪತ್ರವನ್ನು ನಮಗೆ ಓದಿ ಹೇಳಿರುತ್ತಾರೆ.

ಬಿಲಾಲ್, ಅಬ್ದುಲ್ಲ, ಅಮೀನಾ ಮತ್ತು ಬಾನು ಯಾರೆಂದು ಸದರಿ ಸಮಯದಲ್ಲಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ಜಮೀನಿನ ಮಾಲೀಕರೆಂದು ತಿಳಿದುಕೊಂಡಿರುತ್ತೇನೆ ಎನ್ನುವರು. ಅವರೆ ಮಾಲೀಕರೆಂದು ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿದಾರರು ಮೈಸೂರಿನಲ್ಲಿ ಜಮೀನಿನ ವ್ಯಾಪಾರಕ್ಕೆ ಬಂದಾಗ ಗೊತ್ತಾಗಿರುತ್ತದೆ ಎನ್ನುವರು. ಮಾತುಕತೆಯು ಮೈಸೂರಿನ ಟೌನ್ ಹಾಲಿನಲ್ಲಿ ನಡೆದಿರುತ್ತದೆ. ವ್ಯಾಪಾರದ ಮಾತುಕತೆಯಾದಾಗ ನಾನು, ವೆಂಕಟೇಶ್, ಹೆಚ್.ಎನ್.ನಾಗರಾಜು, ಬಿಲಾಲ್, ಅಬ್ದುಲ್ಲ, ಅಮೀನಾ ಮತ್ತು ಬಾನು ಇದ್ದೆವು. ಒಟ್ಟು 2.30 ಲಕ್ಷಕ್ಕೆ ಮಾತುಕತೆಯಾಗಿರುತ್ತದೆ. 9–08 ಎಕರೆ ಜಮೀನಿಗೆ ಮಾತುಕತೆಯಾಗಿರುತ್ತದೆ. ನಾನು 9 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಭಾಷೆ ಚನ್ನಾಗಿ ಮತ್ತು ಇಂಗ್ಲೀಷ್ ಭಾಷೆ ಸ್ವಲ್ಪ ಸ್ವಲ್ಪ ಬರುತ್ತದೆ. ಮಾತುಕತೆಯಾದಾಗ ಆಸ್ತಿಯ ಸಾಗುವಳಿ ಚೀಟಿ, ದರಕಾಸ್ತು ಅರ್ಜಿ ಮತ್ತು ಪಹಣಿಯನ್ನು ನೋಡಿರುತ್ತೇನೆ. ಅವರೇ ಬಿಲಾಲ್, ಅಬ್ದುಲ್ಲ, ಅಮೀನಾ ಮತ್ತು ಬಾನು ಎಂದು ಅವರಿಗೆ ಸಂಬಂಧಪಟ್ಟ ರೇಶನ್ ಕಾರ್ಡ, ಗುರುತಿನ ಚೀಟಿ ಮತ್ತು ಭಾವಚಿತ್ರವನ್ನು ತೋರಿಸಿರುವುದಿಲ್ಲ. ವ್ಯಾಪಾರದ ಮಾತುಕತೆಯು ಬೆಳಿಗ್ಗೆ 10.30 ರಿಂದ 11.30 ರವರೆಗೆ ನಡೆದಿರುತ್ತದೆ. ವ್ಯಾಪಾರದ ಮಾತುಕತೆಯಾದಾಗ ಅಬ್ದುಲ್ಲ ಮತ್ತು ಬಿಲಾಲ್ ಮಾತ್ರ ಬಂದಿದ್ದರು, ಅವರ ಮಕ್ಕಳು ಬಂದಿರಲಿಲ್ಲ. ಮಾತುಕತೆಯಾದ ದಿನ ನಾನು ಮತ್ತು ನಾಗರಾಜು ನಮ್ಮ ಊರಿನಿಂದ ಬಂದಿರುತ್ತೇವೆ. ವೆಂಕಟೇಶ ರವರು ಮೈಸೂರಿನಿಂದ ಟೌನ್ ಹಾಲಿಗೆ ಬಂದಿದ್ದರು. 1 ಮತ್ತು 2 ನೇ ಪ್ರತಿವಾದಿಯರು 4 ಲಕ್ಷ ಚಿಲ್ಲರೆ ವ್ಯಾಪಾರ ಹೇಳಿದ್ದು ಕೊನೆಗೆ ಮಾತುಕತೆಯಾಗಿ 2.30 ಲಕ್ಷಕ್ಕೆ ನಿಗದಿಯಾಗಿರುತ್ತದೆ. ಸದರಿ ದಿನ ಯಾವುದೇ ಮುಂಗಡವನ್ನು ನೀಡಿರುವುದಿಲ್ಲ. ಯಾವುದೇ ಮಾತುಕತೆಯಾದಾಗ ಮುಂಗಡ ಹಣ ನೀಡುತ್ತಾರೆ ಎಂದರೆ ಸಾಕ್ಷಿದಾರರು ಕೊಡಬಹುದು ಕೊಡದೇ ಇರಬಹುದು ಎನ್ನುವರು. ಮೇಲೆ ಹೇಳಿದ ಹಾಗೆ 1 ರಿಂದ 4 ನೇ ಪ್ರತಿವಾದಿಯರು ಮಾತುಕತೆ ದಿನ ಇದ್ದಿರುವುದು ನಿಜವೋ ಅಥವಾ1

ಮತ್ತು 2 ನೇ ಪ್ರತಿವಾದಿಯರು ಮಾತುಕತೆ ದಿನ ಇದ್ದಿರುವುದು ನಿಜವೋ ಎಂದರೆ ಸಾಕ್ಷಿದಾರು 1 ಮತ್ತು 2 ನೇ ಪ್ರತಿವಾದಿ ಮಾತ್ರ ಸದರಿ ದಿನ ಇದ್ದರು ಎನ್ನುವರು. ಮಾತುಕತೆಯ ನಂತರ ಅಬ್ದುಲ್ಲ ರವರು ಮನೆಯ ಎಲ್ಲ ಸದಸ್ಯರ ಜೊತೆ ಬಂದು ಪತ್ರ ಮಾಡಿಕೊಡುವುದಾಗಿ ಹೇಳಿರುತ್ತಾರೆ. ಸದರಿ ಸಮಯದಲ್ಲಿ ನಾನಾಗಲೀ, ಹೆಚ್.ಎನ್.ನಾಗರಾಜುರವರಾಗಲೀ ಅಬ್ದುಲ್ಲ ರವರ ವಂಶವೃಕ್ಷವನ್ನು ಪರಿಶೀಲನೆ ಮಾಡಿರುವುದಿಲ್ಲ. ಸದರಿ ಅಬ್ದುಲ್ಲ ರವರಿಗೆ ಎಷ್ಟು ಜನ ಮಕ್ಕಳು ಎಂದು ಕೇಳಿದ್ದಿರಾ ಎಂದರೆ ಸಾಕ್ಷಿದಾರರು ಮೊದಲು 3 ಜನ ಮಕ್ಕಳು ಎಂದು ಹೇಳಿ ನಂತರ ಇಬ್ಬರು ಮಕ್ಕಳು ಎಂದು ಹೇಳಿರುತ್ತಾರೆ. ನನ್ನ ಸಮಕ್ಷಮ ವ್ಯಾಪಾರವಾಗುವ ಸಮಯದಲ್ಲಿ ಇಬ್ಬರು ಮಕ್ಕಳಿಗೆ ಸಂಬಂಧಪಟ್ಟ ರೇಶನ್ ಕಾರ್ಡ, ವೋಟರ್ ಕಾರ್ಡ ಪರಿಶೀಲನೆ ಮಾಡಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. 2000 ನೇ ಸಾಲಿನಲ್ಲಿ ಸದರಿ ಬಿಲಾಲ್, ಅಬ್ದುಲ್ಲ, ಅಮೀನಾ ಮತ್ತು ಬಾನುರವರಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಬಿಲಾಲ್ ಮತ್ತು ಅಬ್ದುಲ್ಲ ರವರು ಮಧ್ಯ ವಯಸ್ಕರಾಗಿದ್ದರು. ಸದರಿ ಸಮಯದಲ್ಲಿ ನನಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ನೆನಪಿರುವುದಿಲ್ಲ. ಸದರಿ ಸಮಯದಲ್ಲಿ ಅಬ್ದುಲ್ಲ ರವರು ನಿಮಗಿಂತ ಕಡಿಮೆ ಅಥವಾ ಹೆಚ್ಚು ವಯಸ್ಸಿನವರ ಹಾಗೆ ಕಾಣಿಸುತ್ತಿದ್ದರಾ ಎಂದರೆ ಸಾಕ್ಷಿದಾರರು ಅದನ್ನು ನಾನು ಗಮನಿಸಿರುವುದಿಲ್ಲ ಎನ್ನುವರು.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಚಾರ ನನಗೆ ಗೊತ್ತಿರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಮೇಲೆ ಹೇಳಿದ ಮಾತುಕತೆಯ ಬಗ್ಗೆ ಹೇಳಿರುವುದಿಲ್ಲ. ಮಾತುಕತೆಯ ಬಗ್ಗೆ ನನ್ನ ಪ್ರಮಾಣಪತ್ರದಲ್ಲಿ ಹೇಳಲು ಯಾವುದೇ ತೊಂದರೆ ಇರಲಿಲ್ಲ. ಮಾತುಕತೆಯ ಸಮಯದಲ್ಲಿ ನಾನು ಹಾಜರಿದ್ದೆ ಎಂದು ನನ್ನ ವಕೀಲರಿಗೆ ಹೇಳಿರುವುದಿಲ್ಲ. ಆ ರೀತಿ ವಕೀಲರಿಗೆ ಹೇಳಲು ಯಾವುದೇ ತೊಂದರೆ ಇರಲಿಲ್ಲ. ಟೌನ್ ಹಾಲಿನಲ್ಲಿ ವ್ಯಾಪಾರದ ಮಾತುಕತೆಗೆ ಸೇರಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ದಿನ ಅಬ್ದುಲ್ಲ ಮತ್ತು ಬಿಲಾಲ್ ಸದರಿ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಬ್ದುಲ್ಲ ಮತ್ತು ಬಿಲಾಲ್ ರವರು ದಾವಆಸ್ತಿಗಳ ಮಾಲೀಕರಲ್ಲ ಎಂದರೆ ಸಾಕ್ಷಿದಾರರು ಅವರೇ ಸದರಿ ಆಸ್ತಿಗಳನ್ನು ನೋಂದಣಿ ಮಾಡಿಕೊಟ್ಟಿರುತ್ತಾರೆ ಎನ್ನುವರು. ನಾನು, ನಾಗರಾಜು ಮತ್ತು ವೆಂಕಟೇಶ ರವರು ಆಸ್ತಿಯ ಮೂಲ ಮಾಲೀಕರಾಗೇ ಕಾಣುವ ವ್ಯಕ್ತಿಗಳನ್ನು ನೋಂದಣಿ ಕಛೇರಿಗೆ ಕರೆದುಕೊಂಡು ಹೋಗಿ ನಿಪಿ8 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿರುವ ಎಲ್ಲ ವ್ಯಾಪಾರದ ಮಾತುಕತೆ ಸುಳ್ಳು ಎಂದರೆ ಸರಿಯಲ್ಲ. ನಿಪಿ8 ನ್ನು ಸೃಷ್ಟಿ ಮಾಡಿಕೊಂಡು ಬೇರೆ ವ್ಯಕ್ತಿಗಳಿಂದ ಹೆಬ್ಬೆಟ್ಟು ಗುರುತನ್ನು ಹಾಕಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಿನ ಅಬ್ದುಲ್ಲ ಮತ್ತು ಬಿಲಾಲ್ ಹೆಬ್ಬೆಟ್ಟು ಗುರುತನ್ನು ಹಾಕಿದ್ದು, ಅವರ ಇಬ್ಬರು ಹೆಣ್ಣು ಮಕ್ಕಳು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ. ಸಾಕ್ಷಿದಾರರಿಗೆ ನಿಡಿ1 ನ್ನು ತೋರಿಸಿ ಅಬ್ದುಲ್ಲ ಯಾರೆಂದು ಗುರುತಿಸಬಹುದಾ ಎಂದರೆ ಸಾಕ್ಷಿದಾರರು ಮರೆತು ಹೋಗಿರುತ್ತದೆ ಎನ್ನುವರು. ಪತ್ರ ನೋಂದಣಿಯಾದ ದಿನದಂದು ಹಣವನ್ನು ನೋಂದಣಿ ಕಛೇರಿಯಲ್ಲಿ ನೀಡಲಾಗಿರುತ್ತದಾ ಅಥವಾ ಪತ್ರ ಬರಹಗಾರರ ಮುಂದೆ ನೀಡಲಾಗಿರುತ್ತದಾ ಎಂದು

ನೆನಪಿರುವುದಿಲ್ಲ. ಸದರಿ ಪತ್ರವು ಕನ್ನಡ ಅಥವಾ ಇಂಗ್ಲೀಷ್ ಭಾಷೆಯಲ್ಲಿರುತ್ತದಾ ಎಂದು ನೆನಪಿರುವುದಿಲ್ಲ. ಸದರಿ ದಿನ ನೋಂದಣಿ ಕಛೇರಿಗೆ ಬಂದಿದ್ದ ಅಮೀನಾ ಮತ್ತು ಬಾನು ಹೆಣ್ಣು ಮಕ್ಕಳಾಗಿರುತ್ತಾರೆ. ಅವರ ವಯಸ್ಸು ಸದರಿ ಸಮಯದಲ್ಲಿ ಎಷ್ಟಾಗಿತ್ತು ಎಂದು ನೆನಪಿರುವುದಿಲ್ಲ. ನಾನು ಹೇಳುವ ಬಿಲಾಲ್, ಅಬ್ದುಲ್ಲ, ಅಮೀನಾ ಮತ್ತು ಬಾನು ಪರಸ್ಪರ ಗಂಡ, ಹೆಂಡತಿ, ಮಕ್ಕಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಸಂಬಂಧಪಟ್ಟ ರೇಶನ್ ಕಾರ್ಡ, ವೋಟರ್ ಐಡಿ ಪರಿಶೀಲನೆ ಮಾಡಿರುತ್ತಾರಾ ಎಂದರೆ ಸಾಕ್ಷಿದಾರರು 25 ವರ್ಷವಾಗಿರುವುದರಿಂದ ನೆನಪಿರುವುದಿಲ್ಲ ಎನ್ನುವರು. ನೋಂದಣಿ ಕಛೇರಿಗೆ ಬಂದಿದ್ದ ವ್ಯಕ್ತಿಗಳು ನಿಜವಾಗಿ ಆಸ್ತಿಯ ಮಾಲೀಕರಾಗಿದ್ದಲ್ಲಿ ಅವರಿಗೆ ಸಂಬಂಧಪಟ್ಟ ರೇಶನ್ ಕಾರ್ಡ, ವೋಟರ್ ಐಡಿ ಯನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ಸಾಕ್ಷಿದಾರರು ನನಗೆ ಜ್ಞಾಪಕ ಇರುವುದಿಲ್ಲ ಎನ್ನುವರು. ಸದರಿ ದಿನ 2.30 ಲಕ್ಷ ಹಣ ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಸಾಕ್ಷಿ ನುಡಿದಿರುವ ದಾಖಲೆಯು ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. ಸದರಿ ಹೆಚ್.ಎನ್.ನಾಗರಾಜು ನನ್ನ ಸ್ನೇಹಿತನಾಗಿರುವುದರಿಂದ ಅವರ ಮಕ್ಕಳಾದ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 19 ಮತ್ತು 20 ನೇ ಪ್ರತಿವಾದಿಯರ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದ</u>**

ನಾನು ಮತ್ತು ಹೆಚ್.ಎನ್.ನಾಗರಾಜು ರವರು ಒಂದೇ ಊರಿನವರಾಗಿರುವುದರಿಂದ ಪರಿಚಯ ಇತ್ತು. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ. ನನ್ನನ್ನು ನ್ಯಾಯಾಲಯಕ್ಕೆ 2 ನೇ ವಾದಿಯು ಕರೆದುಕೊಂಡು ಬಂದಿರುತ್ತಾರೆ. ಈ ದಾವೆಯನ್ನು ವಾದಿಯರು ಬಿಲಾಲ್ ರವರ ವಿರುದ್ದ ದಾಖಲಿಸಿರುತ್ತಾರೆ. ಎಷ್ಟು ಜನರ ಮೇಲೆ ದಾವೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

ಈ ಹಂತದಲ್ಲಿ ಮೇಲೆ ನುಡಿದ ಪಾಟೀ ಸವಾಲನ್ನು ಮುಂದುವರೆದು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.